ಕ್ರ. ಸಂ.	ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ	ಸದರಿ ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ :
1.	ಜಗದೀಶ ಹೆಚ್.ಎಂ. ಗ್ರೇಡ್-1 ಪ್ರಾಂಶುಪಾಲರು	28-08-2009
2.	ತಿಮ್ಮಹನುಮಯ್ಯ ಹಿ.ಶ್ರೇ.ಉ.	03-09-2009
3.	ಮಂಜುನಾಥ್ ಎಸ್. ಉಪನ್ಯಾಸಕರು	05-09-2009
4.	ನಂಜುಂಡ ಪಿ. ಉಪನ್ಯಾಸಕರು	25-09-2009
5.	ವೀಣಾ ಎಂ.ಎನ್. ಉಪನ್ಯಾಸಕರು	12-09-2009
6.	ವೀಣಾ ಎಂ.ಜಿ., ಉಪನ್ಯಾಸಕರು	02-09-2009
7.	ಪ್ರಿಯದರ್ಶನ್ ಕೆ. ಉಪನ್ಯಾಸಕರು	05-09-2009
8.	ಜಗದೀಶ ನಡುವಿನಮಠ, ಉಪನ್ಯಾಸಕರು	30-10-2003
9.	ನರಸಿಂಹಮೂರ್ತಿ.ಆರ್. ಉಪನ್ಯಾಸಕರು	10-03-2010
10.	ಚಂದ್ರಕಲಾ ಎ. ಉಪನ್ಯಾಸಕರು	21-07-2010
11.	ಗುರುಮೂರ್ತಿ ಕೆ.ಹೆಚ್. ಉಪನ್ಯಾಸಕರು	25-06-2010
12.	ರೂಪಶ್ರೀ ಟಿ.ಎನ್. ಗ್ರಂಥಪಾಲಕರು	28-06-2010
13.	ಉಷಾನಂದಿನಿ, ದೈ.ಶಿ.ಬೋ.	28-06-2010
14.	ಸರೋಜಾಬಾಯಿ ಟಿ.ಎಸ್. ಅಧೀಕ್ಷಕರು	07-09-2009
15.	ಯಲ್ಲಪ್ಪ ಪ್ರ.ದ. ಸಹಾಯಕರು	25-06-2008
16.	ಗಂಗಮ್ಮ, ದ್ವಿ.ದ. ಸಹಾಯಕರು	17-02-2010
17.	ಮಲ್ಲಿಕ ಎಂ.ಆರ್. ಬೆರಳಚ್ಚುಗಾರರು	08-06-2009
18.	ಸುದರ್ಶನ್ ಎಸ್. ಅಟೆಂಡರ್	13-04-2005
19.	ಮಂಜುನಾಥ, ಪರಿಚಾರಕರು	26-07-1997
20.	ಅರುಣ್‌ಕುಮಾರ್ ಎಂ. ಪರಿಚಾರಕರು	04-10-2010

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ರಾಮನಗರ ತಾಲ್ಲೂಕು ಭೈರಮಂಗಲ ಸುತ್ತಮುತ್ತಲ ಪಂಚಾಯಿತಿಗಳಿಗೆ ಕಾವೇರಿ ನೀರು ಸರಬರಾಜು

840 (241) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಭೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದರಿಂದ ಸುತ್ತಮುತ್ತಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಭೈರಮಂಗಲ ಕೆರೆಯನ್ನು ಪುನಃಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಈ ಕೆರೆಯನ್ನು ಪುನಃಶ್ಚೇತನಗೊಳಿಸಲು ಇದುವರೆವಿಗೂ ಸರ್ಕಾರವು ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ;

ಇ) ಭೈರಮಂಗಲ ಕೆರೆಯು ಕಲುಷಿತಗೊಂಡಿರುವುದರಿಂದ ಶುದ್ಧ ಕುಡಿಯುವ ನೀರು ದೊರೆಯದೆ ಸುತ್ತಮುತ್ತಲ ಮೂರು ಪಂಚಾಯತ್ತಿಗಳ ವ್ಯಾಪ್ತಿಯ ಗ್ರಾಮಗಳ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದರಿಂದ ಕಾವೇರಿ ನೀರನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ ; ಕಾವೇರಿ ನೀರನ್ನು ಎಷ್ಟು ಅವಧಿಯಲ್ಲಿ ಒದಗಿಸಲಾಗುವುದು, ಭೈರಮಂಗಲ ಕೆರೆಯ ಸುತ್ತಮುತ್ತಲ ಮೂರು ಪಂಚಾಯತಿಗಳ ಗ್ರಾಮಗಳಿಗೆ ಶುದ್ಧ, ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಭೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದು ನಿಜ. ಪ್ರಸ್ತುತ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಕೊಳವೆ ಬಾವಿಗಳ ಕುಡಿಯುವ ನೀರಿನ ಪರೀಕ್ಷೆ ಮಾಡಿದ್ದು, ನೀರು ಕುಡಿಯಲು ಯೋಗ್ಯವಾಗಿರುವುದೆಂದು ವರದಿಯಾಗಿದೆ.

ಆ) ಭೈರಮಂಗಲ ಕೆರೆಯ ಪುನಃಶ್ಚೇತನವನ್ನು ಸಣ್ಣ ನೀರಾವರಿ ಇಲಾಖೆ ನೋಡಿಕೊಳ್ಳುತ್ತಿದೆ. ಸದರಿ ಕರೆಗೆ ಬಂದಿರುವ ಕಲುಷಿತ ನೀರಿನ